ಜಮೀನನ್ನು ಸಿ.ಐ.ಟಿ.ಬಿ.ಯವರು ಅಕ್ವೈರ್ ಮಾಡಿಕೊಂಡದ್ದಾರೆ ಎಂದು ವರ್ತಮಾನ ಸಿಕ್ಕಿದ್ದರಿಂದ ಅದನ್ನು ಹಾಗೆ ಇಟ್ಟುಕೊಂಡಿದ್ದರು. ಈ ಮಧ್ಯೆ ಸೋಷಿಯಲ್ ಡಿಪಾರ್ಟ್‌ಮೆಂಟಿಗೆ 1974ನೇ ಇಸವಿಯಲ್ಲಿ ಹೋದಂಥ ಫೈಲ್ ಮತ್ತೆ ಪಾಪಸ್ಸು ಬರಲಿಲ್ಲ ಇದು ಈಗ ಇರತಕ್ಕ ಪರಿಸ್ಥಿತಿ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ. ಸ್ವಾಮಿ, ಇದು 25 ವರ್ಷದ ರೆಕಾರ್ಡ್, ತಾವು 1971ನೇ ಇಸವಿಯಿಂದ ಹುಟ್ಟಿದೆ ಎಂದು ಹೇಳುತ್ತಿದ್ದೀರಿ, ಈಗ ಸಿ.ಐ.ಟಿ.ಬಿ.ಯಿಂದ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ತರಿಸಿಕೊಂಡಿದ್ದಾರೆ. ಮತ್ತೆ ಸಮಾಜ ಕಲ್ಯಾಣ ಇಲಾಖೆಯವರು 75 ಸಾವಿರ ರೂಪಾಯಿ ಕಟ್ಟಲಿಕ್ಕೆ ಸಿದ್ಧರಾಗಿದ್ದಾರೆ, ಡಿಮ್ಯಾಂಡ್ ನೋಟೀಸ್ ಕಳುಹಿಸಿಕೊಡಿ ಎಂದು ರೆವಿನ್ಯೂ ಇಲಾಖೆಗೆ ಬರೆದಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ಬೇರೆಯವರು ಈ ಜಮೀನು ಇವರಿಗೆ ಆಗುತ್ತದೆ ಎಂದು ಅತಿಕ್ರಮಣ ಮಾಡಿ ಮನೆ ಕಟ್ಟಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಇಷ್ಟು ತಡವಾಗಿರತಕ್ಕ ಸಮಸ್ಯೆಯನ್ನು ಜಾಗ್ರತೆ ತರಿಸಿಕೊಂಡು ನಿರ್ಗತಿಕ ಬಡವರಿಗೆ ನಿವೇಶನ ಇಲ್ಲದೇ ಇರತಕ್ಕೆ ಜನರಿಗೆ ಹಂಚತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಇವೊತ್ತು ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್‌ರವರಿಂದ ಫೈಲ್ ಬರದೇ ಇದ್ದರು ಹೊಸದಾಗಿ ಬಿಲ್ಡ್ ಅಪ್ ಮಾಡಿ 2 ಎಕರೆ 28 ಗುಂಟೆ ಫೈನರ್ ನೋಟಿಫಿಕೇಷನ್ ಆಗಿ ಅವಾರ್ಡ್ ಪಾಸ್ ಆಗುವುದು ಇದೆ ಉಳಿದ 8 ಗುಂಟೆಗೆ ಮತ್ತೆ ನೋಟಿಫಿಕೇಷನ್ ಆಗಿ ಅವಾರ್ಡ್ ಪಾಸ್ ಆದ ಕೂಡಲೇ ಆ ಜಮೀನನ್ನು ಅವರಿಗೆ ಸ್ವಾಧೀನ ಕೊಡುತ್ತೇವೆ. ಈ ಬಗ್ಗೆ ಸಾಕಾದಷ್ಟು ಕಾರ್ಯಕ್ರಮ ತೆಗೆದುಕೊಂಡಿದೆ.

Bridge Work near Badikegudla in Chikanayakanahalli Taluk

332. SRI N. BASAVAIAH (Chikanayakanahalli).—Will the Minister for Public Works be pleased to state.—

(*a*) whether the Bridge work which is to be constructed near Badikegudla, Kandikere Hobli of Chikanayakanahalli Taluk has been started ;

(*b*) if not, the reasons for delay ;

(*c*) the period in which the work will be completed ?

SRI M. MALLIKARJUNA SWAMY (Minister for Public Works).—

(*a*) No.

(*b*) (i) The tenders received have not been accepted as the contractors have quoted high percentage tenders.

(ii) The Karnataka construction Corporation Ltd., has expressed its inability to take up this work.

(*c*) Two years from the date of entrusting the work.

ಶ್ರೀ ಎನ್. ಬನವಯ್ಯ.—ಸ್ವಾಮಿ, ತಮ್ಮ ಉತ್ತರದಲ್ಲಿ ಈ ಕೆಲಸ ಪ್ರಾರಂಭವಾಗಿಲ್ಲ ಎಂದು ಹೇಳಿದ್ದೀರಿ. ಕಂಟ್ರಾಕ್ಟರ್ ಹೆಚ್ಚಿಗೆ ಟೆಂಡರ್ ಹಾಕಿದ್ದರಿಂದ ಅವರಿಗೆ ಕೊಡಲಿಕ್ಕೆ ಆಗಿಲ್ಲ. ಇವೊತ್ತು ಕಾರ್ಪೊರೇಷನ್ ಅನುಮತಿ ಸೂಚಿಸುವುದಾದರೆ, ಈ ಬ್ರಿಡ್ಜ್ ಕಾರ್ಪೊರೇಷನ್ ಇರುವುದಾದರೂ ಏತಕ್ಕೆ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಕಾರ್ಪೊರೇಷನ್ ಇರುವುದು ಬ್ರಿಡ್ ಕಟ್ಟಲು ಕೋಸ್ಕರ.

ಶ್ರೀ ಎನ್. ಬನವಯ್ಯ.—ಇವೊತ್ತು ಕೊಡತಕ್ಕ 2 ಲಕ್ಷ ರೂಪಾಯಿಗಳಿಂದ ಕ್ಲೈಬಿಡ್ಜ್ ಕಟ್ಟುವುದಕ್ಕಾಗುವುದಿಲ್ಲ ಎಂದು ಅವರು ಆನಮ್ಮತಿ ನೂಚಿನಲು ಕಾರಣ ಏನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಅವರು 16 ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ. ಅವರು ನಮ್ಮಲ್ಲರತಕ್ಕ ಸಿಬ್ಬಂದಿ ವರ್ಗೆರೆ ಸಾಲುವುದಿಲ್ಲ, ಬೇರೆಯವರಿಗೆ ಈ ಕೆಲಸವನ್ನು ಕೊಡಿ ಎಂದು ಹೇಳಿದ್ದಾರೆ.

ಶ್ರೀ ಎನ್. ಬನವಯ್ಯ.—ಇವೊತ್ತು ಬೇರೆಯವರು ಹೆಚ್ಚಿಗೆ ಚೆಂಡರ್ ಕೇಳಿದರೆ ಕೊಡುವುದಕ್ಕೆ ಆಗುವುದಿಲ್ಲ. ತಾವು ಈ ರೀತಿ ಮುಂದುವರೆಸುವುದರಿಂದ ಆಲ್ಲರತಕ್ಕ ರೈತರಿಗೆ ಬಹಳ ತೊಂದರೆ ಯಾಗುತ್ತದೆ, ಆದುದರಿಂದ ಈ ಕೆಲಸವನ್ನು ಡಿಪಾರ್ಟ್‌ಮೆಂಟ್ ಮುಖಾಂತರ ಮಾಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—1972-73ನೇ ಇಸವಿಯಿಂದ ಇಲ್ಲಿಯವರೆಗೂ ನಾಲ್ಕೈದು ಸಾರಿ ಚೆಂಡರ್ ಕರೆದು, ಪ್ರೈವೇಟ್ ನೆಗೋಸಿಯೇಷನ್ ಮಾಡಿದರೂ ಕೂಡ ಪ್ರತಿ ವರ್ಷ 20 ಸಾವಿರ, 30 ಸಾವಿರ. 40 ಸಾವಿರ ರೂಪಾಯಿ ಹೀಗೆ ಬಡ್ಜೆಟ್ಟಿನಲ್ಲಿ ಸೇರಿಸಿದರೂ ಕೂಡ ಈ ಕೆಲಸ ತೆಗೆದುಕೊಳ್ಳಲಿಕ್ಕೆ ಆಗಿಲ್ಲ ಇವೊತ್ತು ಪಿ.ಡಬ್ಲ್ಯು ಡಿ. ಇರಾಖೆಯಲ್ಲ ಸಾಕಷ್ಟು ಜನ ಇಂಜಿನಿಯರುಗಳು ಇರುವುದರಿಂದ ಇದನ್ನು ನಮ್ಮ ಇಂಜಿನಿಯರುಗಳ ಮುಖಾಂತರವೇ ಮಾಡಿಸಬೇಕು ಎಂದು ತೀರ್ಮಾನವಮಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ.—ಬ್ರಿಡ್ಜಸ್ ಕಾರ್ಪೊರೇಷನ್‌ನವರು 1971-72ನೇ ಇಸವಿಯಿಂದ ಸಿಬ್ಬಂದಿ ವರ್ಗ ಇಲ್ಲ ಎಂದು ಹೇಳುತ್ತಾ ಇದ್ದಾರೋ ಅಥವಾ ಇತ್ತೀಚೆಗೆ ನಮ್ಮಲ್ಲಿ ಸಿಬ್ಬಂದಿ ವರ್ಗ ಇಲ್ಲ ಎಂದು ಹೇಳುತ್ತಾ ಇದ್ದಾರೋ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬ್ರಿಡ್ಜ್ ಕಾರ್ಪೊರೇಷನ್ ಬಂದಿದ್ದು 1975ನೇ ಇಸವಿಯಿಂದ ಈಚೆಗೆ. ಇವೊತ್ತು ಅವರು ನಮ್ಮಲ್ಲ ಸಾಕಷ್ಟು ಸಿಬ್ಬಂದಿ ಇಲ್ಲ ಎಂದು ಹೇಳಿದ್ದಾರೆ, ಈಗ ನಮ್ಮ ಇರಾಖೆಯಲ್ಲ ಸಾಕಷ್ಟು ಸಿಬ್ಬಂದಿ ಇರುವುದರಿಂದ ನಮ್ಮ ಇಂಜಿನಿಯರ್ ಕಡೆಯಿಂದಲೇ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಇವೊತ್ತು ಬ್ರಿಡ್ಜ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ದಕ್ಷತೆಯಿಂದ ಕೆಲಸ ಮಾಡಲಕ್ಕೆ ಅಲ್ಲಿ ನಾನ್ ಅಫಿಷಿಯರ್ ಜೇರಮೆನ್ ನೇಮಕ ಮಾಡಲಕ್ಕೆ ಏನಾದರೂ ಯೋಚನೆ ಮಾಡಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದರಲ್ಲಿ ಜೇರ್‌ಮೆನ್ ನೇಮಕ ಮಾಡುವ ಪ್ರಶ್ನೆಯೇ ಇಲ್ಲ. ಅಲ್ಲಿ ಚೀಫ್ ಇಂಜಿನಿಯರ್ ಕೂಡ ಬದರಾಯಿನಬಹುದು. ಅಲ್ಲಿ ಜೇರ್‌ಮೆನ್ ನೇಮಕ ಮಾಡಲಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮುಖ್ಯಮಂತ್ರಿಗಳವರ ಕಚೇರಿಯಲ್ಲ ಯಾವ ಯಾವ ಕಾರ್ಪೊರೇಷನ್‌ಗೆ ಯಾರು ಯಾರನ್ನು ಜೇರ್‌ಮೆನ್ ಮಾಡಬೇಕು ಎನ್ನುವ ಬಗ್ಗೆ ಒಂದು ಪಟ್ಟಿ ತಯಾರಾಗುತಿ ದೆ ಎಂದು ಕೇಳಿದೆ. ಅದು ನಿಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ನನ್ನ ಗಮನಕ್ಕೆ ಬಂದಿಲ್ಲ, ಅದು ಒಂದು ಬಿಳಿ ಆನೆಯಂತೆ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

Construction of Bridges by the Construction Corporation

367. SRI KAGODU THIMMAPPA(Sagar).—Will the Minister for Public Works be pleased to state.—

(*a*) the number of bridges entrusted to the State Construction Corporation by the Government ;

(*b*) the amount advanced so far ;